ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಮು.ಆ /ಪಿಆರ್ /3476/2021-22

ಮುಖ್ಯ ಆಯುಕ್ತರವರ ಕಛೇರಿ,
ಎನ್.ಆರ್.ಚೌಕ,ಬೆಂಗಳೂರು-02
ದಿನಾಂಕ: 08-12-2021

ರವರಿಗೆ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ವಿಷಯ:- 2019-20ನೇ ಸಾಲಿನಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ನವನಗರೋತ್ಥಾನ ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ Construction of Convention Hall infront of Rangamandira At Attur layout in ward no-03. ಎಂಬ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್ ಅನುಮೋದನೆ ನೀಡುವ ಬಗ್ಗೆ.

ಒಂದು ಪ್ರತಿಯನ್ನು ಸ್ವೀಕರಿಸಿದೆ
ಮೇಲಿನ ವಿಷಯ ನೋಡಿಲ್ಲ
ನಗರಾಭಿವೃದ್ಧಿ ಇಲಾಖೆ (ಸ್ವೀಕರಿಸಿದವರ ಸಹಿ)
ವಿಕಾಸ ಸೌಧ, ಬೆಂಗಳೂರು
5/12/21

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ : ನಅಇ 375 ಎಂ.ಎನ್.ಸ್ಯೆ 2018 ದಿನಾಂಕ: 20-09-2019.

2. Work Indent No: BBMP/2019-20 / C.V/ Work_ INDENT _40982/ CALL-2

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರದೇಶಗಳಲ್ಲಿ ಮೂಲಭೂತ ಸೌಕಾರ್ಯಗಳ ಅಭಿವೃದ್ಧಿಗಾಗಿ ಮಾನ್ಯ ಮುಖ್ಯ ಮಂತ್ರಿಗಳ ನವನಗರೋತ್ಥಾನ ಯೋಜನೆಯಡಿಯಲ್ಲಿ ರೂ.8015.37 ಕೋಟಿಗಳ ಅನುದಾನ ಮಂಜೂರಿಸಿದ್ದು, ಸರ್ಕಾರದ ಆದೇಶ ಸಂಖ್ಯೆ : ನಅಇ 375 ಎಂ.ಎನ್.ಸ್ಯೆ 2018 ಬೆಂಗಳೂರು ದಿನಾಂಕ: 20-9-2019 ರಲ್ಲಿ ಅನುಬಂಧ-6ರಲ್ಲಿ ಈ ಮೇಲ್ಕಂಡ ಕಾಮಗಾರಿಗೆ ಅನುಮೋದನೆ ನೀಡಿರುತ್ತಾರೆ.

ಸದರಿ ಕಾಮಗಾರಿಗಳಿಗೆ ದಿನಾಂಕ:11-08-2021 ರಂದು ಜಿ-ಲಕೋಟೆ E-Procurement ಪದ್ಧತಿಯಲ್ಲಿ ರೂ.50.00 ಲಕ್ಷಗಳಿಗೆ ಕಾಮಗಾರಿ ಟೆಂಡರ್ ಪ್ರಕಟಣೆ ಸಂಖ್ಯೆ: BBMP/EE/YNK.D/ E-PMT/05/2021-22 dated: 11-8-2021 ರಂತೆ ಜಿಲಕೊಟೆ ಇ-ಪ್ರಕ್ಯೂರ್‌ಮೆಂಟ್ ಪದ್ಧತಿಯಂತೆ ರೂ.46.25 ಲಕ್ಷಗಳಿಗೆ (ಟೆಂಡರ್‌ಗಿಟ್ಟ ಮೊತ್ತ) ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ದಿನಾಂಕ: 02-09-2021 ರಂದು ತೆರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ ಮೂರು ಜನ ಬಿಡ್‌ದಾರರು ಭಾಗವಹಿಸಿದ್ದು ವಿವರ ಕೆಳಕಂಡಂತಿರುತ್ತದೆ.

Krishna

ಕ್ರ ಸಂ	ಕಾಮಗಾರಿಯ/ ಯೋಜನೆಯ ಹೆಸರು	ಅಂದಾಜು ಮೊತ್ತರೂ. (ಲಕ್ಷಗಳಲ್ಲಿ)	ಟೆಂಡರ್ ಗಿಟ್ಟ ಮೊತ್ತ ರೂ. (ಲಕ್ಷಗಳಲ್ಲಿ)	ಟೆಂಡರ್‌ನಲ್ಲಿ ಭಾಗವಹಿಸಿರುವ ಗುತ್ತಿಗೆದಾರರು	ಷರಾ
1	Construction of Convention Hall infront of Rangamandira At Attur layout in ward no -03	50.00	44.25	Sri. R Ranganath	Technically Qualified
				Sri venkatesh N (Sreshta Constructions)	Technically Qualified
				Sri Manoj Naik B M	Technically Dis-Qualified

ಬಿಡ್‌ದಾರರಾದ 1) Sri. R Ranganath 2) Sri Venkatesh N (Sreshta Constructions) ರವರು ತಾಂತ್ರಿಕವಾಗಿ ಅರ್ಹತೆ ಹೊಂದಿರುವುದರಿಂದ ದಿನಾಂಕ: 6-11-2021 ರಂದು ಮಾನ್ಯ ಮುಖ್ಯ ಅಯುಕ್ತರವರ ಅಧ್ಯಕ್ಷತೆಯಲ್ಲಿರುವ ತಾಂತ್ರಿಕ ಮೌಲ್ಯಮಾಪನ ಸಮಿತಿಯು ತಾಂತ್ರಿಕ ಬಿಡ್‌ಗೆ ಅನುಮೋದನೆ ನೀಡಿರುವಂತೆ ದಿನಾಂಕ:15-11-2021 ರಂದು ಆರ್ಥಿಕ ಬಿಡ್‌ನ್ನು ತೆರೆಯಲಾಗಿದ್ದು, ವಿವರ ಈ ಕೆಳಕಂಡಂತಿದೆ.

ಕ್ರ ಸಂ	ಗುತ್ತಿಗೆದಾರರ ಹೆಸರು	ಟೆಂಡರ್ ಗಿಟ್ಟ ಮೊತ್ತ 2018-19 ರ ಅನುಮೋದಿತ ದರಗಳಿಗೆ ಹೋಲಿಸಿದಾಗ	ಟೆಂಡರ್ ಗಿಟ್ಟ ಮೊತ್ತ 2-11-2021 ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ	ಗುತ್ತಿಗೆದಾರರು ನಮೂದಿಸಿರುವ ದರಗಳು	2018-19ನೇ ಸಾಲಿನ ದರಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇಕಡಾವಾರು	ದಿನಾಂಕ 2-11-2021 ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇಕಡಾವಾರು	ಷರಾ
01	Sri. R Ranganath	44,25,647.78	45,52,090.72	46,44,662.80	(+) 4.95%	(+)2.03%	ಎಲ್-1
02	Sri Venkatesh N (Sreshta Constructions)			46,91,193.38	(+) 6.00%	(+) 3.05%	

ಸದರಿ ಟೆಂಡರ್‌ನಲ್ಲಿ ಕನಿಷ್ಟ ದರ ನಮೂದಿಸಿರುವ **Sri R Ranganath** ರವರು ರೂ. **46,44,662.80** ಗಳನ್ನು ನಮೂದಿಸಿರುತ್ತಾರೆ, ಈ ಮೊತ್ತವನ್ನು ಕರ್ನಾಟಕ ಲೋಕೋಪಯೋಗಿ 2018-19ನೇ ದರಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇ.4.95% ಹೆಚ್ಚು ಇದ್ದು, ಹಾಗೂ ದಿನಾಂಕ: 2-11-2021 ರಂದು ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇ (+) 2.03% ರಷ್ಟು ಹೆಚ್ಚಾಗಿರುತ್ತದೆ. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಎಲ್-1 ಗುತ್ತಿಗೆದಾರರೊಂದಿಗೆ ದರ ಸಂಧಾನ ನಡೆಸಿದ್ದು, ವಿವರ ಈ ಕೆಳಕಂಡಂತಿರುತ್ತದೆ.

	BEFORE NEGOTIATION				AFTER NEGOTIATION		
ಕ್ರ ಸಂ.	ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರು	ಗುತ್ತಿಗೆದಾರರು ನಮೂದಿಸಿರುವ ದರಗಳು	2018-19ನೇ ಸಾಲಿನ ಎಸ್.ಆರ್ ಧರಗಳಿಗೆ ಹೋಲಿಸಿದಾಗ ಶೇಕಡವಾರು	ದಿನಾಂಕ: 2-11-2021 ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇಕಡವಾರು	ದರ ಸಂದಾನದ ನಂತರ ಗುತ್ತಿಗೆದಾರರು ನಮೂದಿಸಿರುವ ಮೊತ್ತ	2018-19ನೇ ಸಾಲಿನ ಎಸ್.ಆರ್ಧರ ಗಳಿಗೆ ಹೋಲಿಸಿದಾಗ ಶೇಕಡವಾರು	ದಿನಾಂಕ: 2-11-2021 ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇಕಡವಾರು
01	Sri. R Ranganath	46,44,662.80	(+) 4.95%	(+)2.03%	46,40,291.69	(+) 4.85%	(+)1.93%

ಮೇಲ್ಕಂಡ ವಿವರಗಳಂತೆ ಎಲ್-1 ಗುತ್ತಿಗೆದಾರರೊಂದಿಗೆ ದರ ಸಂಧಾನ ನಡೆಸಿದ ನಂತರದ ಮೊತ್ತವು ರೂ. **46,40,291.69** ಗಳಾಗಿದ್ದು, ಈ ಮೊತ್ತವನ್ನು ಕರ್ನಾಟಕ ಲೋಕೋಪಯೋಗಿ 2018-19ನೇ ದರಪಟ್ಟಿಯ ದರಗಳಿಗೆ ಹೋಲಿಸಿದಾಗ **ಶೇ.4.85%** ಹೆಚ್ಚುವರಿಯಾಗಿರುತ್ತದೆ. ಹಾಗೂ ದಿನಾಂಕ: 2-11-2021 ರಂದು ಪರಿಷ್ಕೃತ ದರಗಳಿಗೆ ಹೋಲಿಸಿದಾಗ **ಶೇ 1.93%** ರಷ್ಟು ಹೆಚ್ಚಾಗಿರುತ್ತವೆ.

ಸದರಿ ಕಾಮಗಾರಿಯ ಅಂದಾಜು ಮೊತ್ತವು ರೂ. 50.00 ಲಕ್ಷಗಳಾಗಿದ್ದು, ಯಲಹಂಕ ವಿಭಾಗಕ್ಕೆ ಮಾನ್ಯ ಮುಖ್ಯ ಮಂತ್ರಿಗಳ ನವನಗರೋತ್ಥಾನ ಯೋಜನೆಯಡಿಯಲ್ಲಿ ಮಂಜೂರಾಗಿರುವ ಕ್ರೀಯಾ ಯೋಜನೆಯಲ್ಲಿ ರೂ. 50.00 ಲಕ್ಷ ಹಾಗೂ ಇದಕ್ಕಿಂತ ಕಡಿಮೆ ಮೊತ್ತ ಬರುವ ಏಕೈಕ ಕಾಮಗಾರಿಯಾಗಿದ್ದು. ಸದರಿ ಕಾಮಗಾರಿಯನ್ನು ಕ್ಯಾಂಡಿಡೇಷನ್‌ಗೆ ಒಳಪಡಿಸಿದಾಗ ಪರಿಶಿಷ್ಟ ಜಾತಿಗೆ ಮೀಸಲಿಡಿಸಬೇಕಾಗಿರುತ್ತದೆ. ಆದುದರಿಂದ ಈ ಕಾಮಗಾರಿಯನ್ನು ಉಳಿದ ಪ್ಯಾಕೇಜ್‌ವಾರು ಕಾಮಗಾರಿಗಳಲ್ಲಿ ವಿಲೀನಗೊಳಿಸಲು ಸಾಧ್ಯವಾಗಿರುವುದಿಲ್ಲ. ಆದುದರಿಂದ ಪ್ರತ್ಯೇಕವಾಗಿ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಆದುದರಿಂದ ದಿನಾಂಕ: 02-12-2021 ರಂದು ನಡೆದ ಅರ್ಥಿಕ ಮೌಲ್ಯಮಾಪನ ಮತ್ತು ದರ ಸಂದಾನ ಸಮಿತಿ ಸಭೆಯಲ್ಲಿ ರೂ.**46,40,291.69** ಗಳಿಗೆ ಟೆಂಡರ್ ಅನುಮೋದಿಸಲು ಶಿಫಾರಸ್ಸು ಮಾಡಲಾಗಿರುತ್ತದೆ. ಆದುದರಿಂದ ಮೇಲ್ಕಂಡ ಕಾಮಗಾರಿಯನ್ನು ವಾರ್ಡ್ ನಂ-03ರ ವ್ಯಾಪ್ತಿಯಲ್ಲಿ ಕೈಗೊಂಡು ನಿರ್ವಹಿಸಬೇಕಾಗಿರುವುದರಿಂದ ರೂ.50.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಕಡಿಮೆ ಮೊತ್ತ ನಮೂದಿಸಿರುವ ಬಿಡ್‌ದಾರರಾದ **Sri R Ranganath** ರವರ ಟೆಂಡರ್‌ನ ಮೊತ್ತ ರೂ.**46,40,291.69** ಗಳಿಗೆ **(ಶೇ.4.85% ರಷ್ಟು ಹೆಚ್ಚು)** ಟೆಂಡರ್ ಅನುಮೋದನೆ ನೀಡಲು ಕೋರಲಾಗಿದೆ.

ತುಷಾರ್ ಗಿರಿನಾಥ್
ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.